# ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

ಮುಕ್ತಗಂಗೋತ್ರಿ, ಮೈಸೂರು-570006

ದಿನಾಂಕ 03.10.2018ರಂದು ಬೆಳಗ್ಗೆ 10.00 ಘಂಟೆಗೆ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಆಡಳಿತ ಭವನದ ಮಾನ್ಯ ಕುಲಪತಿಗಳ ಕಛೇರಿಯ ಸಭಾಂಗಣದಲ್ಲಿ ಮಾನ್ಯ ಕುಲಪತಿಗಳಾದ ಪ್ರೊ. ಡಿ.ಶಿವಲಿಂಗಯ್ಯರವರ ಅಧ್ಯಕ್ಷತೆಯಲ್ಲಿ ನಡೆದ ವಿಶೇಷ ಶೈಕ್ಷಣಿಕ ಮಂಡಳಿ ಸಭೆಯ ನಡವಳಿ.

| ಉಪಸ್ಥಿತರು | |
|---|---|
| **ಪ್ರೊ. ಡಿ. ಶಿವಲಿಂಗಯ್ಯ**<br>ಮಾನ್ಯ ಕುಲಪತಿಗಳು ಹಾಗೂ<br>ಶೈಕ್ಷಣಿಕ ಮಂಡಳಿಯ ಅಧ್ಯಕ್ಷರು,<br>ಕರಾಮುವಿ, ಮೈಸೂರು. | **ಪ್ರೊ. ರಮೇಶ್.ಬಿ.**<br>ಕುಲಸಚಿವರು ಮತ್ತು<br>ಶೈಕ್ಷಣಿಕ ಮಂಡಳಿ ಸದಸ್ಯ ಕಾರ್ಯದರ್ಶಿಗಳು<br>ಕರಾಮುವಿ, ಮೈಸೂರು. |
| **ಪ್ರೊ. ಜಗದೀಶ,**<br>ಡೀನ್ (ಶೈಕ್ಷಣಿಕ) ಹಾಗೂ<br>ಶೈಕ್ಷಣಿಕ ಮಂಡಳಿಯ ಸದಸ್ಯರು, ಕರಾಮುವಿ,<br>ಮೈಸೂರು. | **ಡಾ. ಎ. ಖಾದರ್ ಪಾಷಾ**<br>ಹಣಕಾಸು ಅಧಿಕಾರಿಗಳು,<br>ಕರಾಮುವಿ, ಮೈಸೂರು |
| **ಪ್ರೊ. ಎ. ರಂಗಸ್ವಾಮಿ**<br>ಕುಲಸಚಿವರು (ಪರೀಕ್ಷಾಂಗ)<br>ಕರಾಮುವಿ, ಮೈಸೂರು | **ಪ್ರೊ. ಡಿ.ಬಿ. ಬಸವರಾಜ್**<br>ಡೀನ್ (ಅಧ್ಯಯನ ಕೇಂದ್ರಗಳು) ಹಾಗೂ<br>ಶೈಕ್ಷಣಿಕ ಮಂಡಳಿಯ ಸದಸ್ಯರು, ಕರಾಮುವಿ,<br>ಮೈಸೂರು. |
| **ಡಾ. ಎನ್. ಲಕ್ಷ್ಮಿ**<br>ಶಿಕ್ಷಣ ಶಾಸ್ತ್ರ, ಕರಾಮುವಿ, ಮೈಸೂರು. – ಆಹ್ವಾನಿತರು | |

ದಿನಾಂಕ: 03.10.2018 ರಂದು ನಡೆದ ವಿಶೇಷ ಶೈಕ್ಷಣಿಕ ಸಭೆಗೆ ಹಾಜರಾದ ಸದಸ್ಯರುಗಳನ್ನು ಮಾನ್ಯ ಕುಲಪತಿಗಳು ಸ್ವಾಗತಿಸುವುದರೊಂದಿಗೆ ಸಭೆಯು ಪ್ರಾರಂಭವಾಯಿತು. ಮುಂದುವರೆದು ಮಾನ್ಯ ಕುಲಪತಿಗಳು ಮಾತನಾಡುತ್ತಾ ವಿಶೇಷ ಶೈಕ್ಷಣಿಕ ಮಂಡಳಿ ಸಭೆಯನ್ನು ಕರೆದಿರುವ ಉದ್ದೇಶವನ್ನು ಸದಸ್ಯರುಗಳ ಗಮನಕ್ಕೆ ತಂದರು.

Dean (Academic)
K.S.O.U

ಕುಲಪತಿ

ಕುಲಸಚಿವ

DEAN (ACADEMIC) K.S.O.U. MYSURU-570 006
B.R. No. 1021
Dated 9-10-18



REGISTRAR PERSONAL SECTION,
R.P.A No. 1725
Computer No.
Date 09-10-2018
KSOU, MYSURU - 570 006.

ವಿಷಯ ಸಂಖ್ಯೆ:-01

ವಿಷಯ : **Statute relating to direct recruitment and career advancement scheme to Teachers and Librarians in the Karnataka State Open University** ಪರಿನಿಯಮವನ್ನು ಪರಿಷ್ಕರಿಸುವ ಬಗೆಗೆ.

* * * * *

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿನ ಬೋಧಕ ಹುದ್ದೆಗಳ ನೇಮಕಾತಿ ಹಾಗೂ ಹಾಲಿ ಬೋಧಕರಿಗೆ ವೃತ್ತಿ ಪದೋನ್ನತಿ ಯೋಜನೆಯಡಿಯಲ್ಲಿನ ನಿಯಮಗಳನ್ನೊಳಗೊಂಡ ಕರಡು ಪರಿನಿಯಮವನ್ನು ರಚಿಸಿ ದಿನಾಂಕ: 22.03.2018 ರಂದು ನಡೆದ ಶೈಕ್ಷಣಿಕ ಮಂಡಳಿ ಸಭೆ, ದಿನಾಂಕ: 24.03.2018 ರಂದು ನಡೆದ ಹಣಕಾಸು ಸಮಿತಿಯ ಸಭೆ, ಹಾಗೂ ವ್ಯವಸ್ಥಾಪನ ಮಂಡಳಿ ಸಭೆಯ ಅನುಮೋದನೆ ಪಡೆದು, ಸದರಿ ಕರಡು ಪರಿನಿಯಮಕ್ಕೆ ಘನತೆವೆತ್ತ ಕುಲಾಧಿಪತಿಗಳ ಅಂಕಿತ ದೊರಕಿಸಿ ಕೊಡಲು ಕೋರಿ ಕರಡು ಪ್ರಸ್ತಾವನೆಯನ್ನು ಸರ್ಕಾರಕ್ಕೆ ದಿನಾಂಕ: 21.06.2018 ರಂದು ಸಲ್ಲಿಸಲಾಗಿದ್ದಿತು.

ಈ ಕರಡು ಪರಿನಿಯಮದ ಬಗ್ಗೆ ಸರ್ಕಾರವು ತನ್ನ ದಿನಾಂಕ: 07.09.2018ರ ಪತ್ರದಲ್ಲಿ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಬೋಧಕರು ಹಾಗೂ ಗ್ರಂಥಪಾಲಕರ ನೇರ ನೇಮಕಾತಿ ಮತ್ತು ವೃತ್ತಿ ಪದನ್ನೋತಿ ಯೋಜನೆಯ ಕುರಿತ ಪರಿನಿಯಮಾವಳಿಗಳಿಗೆ ಅನುಮೋದನೆ ನೀಡುವ ಸಂಬಂಧ ಸರ್ಕಾರದ ಆದೇಶ ಸಂಖ್ಯೆ: ಇಡಿ 136 ಯುಎನ್ಇ 2017 ದಿನಾಂಕ:17.07.2017ರ ಮಾರ್ಗಸೂಚಿಗಳನ್ನು ಅಳವಡಿಸಿಕೊಂಡು ಸಕ್ಷಮ ಪ್ರಾಧಿಕಾರಗಳ ಅನುಮೋದನೆ ಪಡೆದು ಪರಿಷ್ಕೃತ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸುವಂತೆ ನಿರ್ದೇಶನ ನೀಡಲಾಗಿರುತ್ತದೆ.

ಅದರಂತೆ ಈಗಾಗಲೇ ಸಲ್ಲಿಸಲಾಗಿದ್ದ ಕರಡು ಪರಿನಿಯಮಕ್ಕೆ ಉಲ್ಲೇಖಿತ ಸರ್ಕಾರಿ ಆದೇಶದಲ್ಲಿನ ಮಾರ್ಗಸೂಚಿಗಳನ್ನು ಅಳವಡಿಸಿ ಇದೇ ಸಂಬಂಧದಲ್ಲಿ ರಚಿಸಲಾಗಿದ್ದ ಉಪ ಸಮಿತಿಯು ಸಲ್ಲಿಸಿರುವ ಪರಿಷ್ಕೃತ ಕರಡು ಪರಿನಿಯಮವನ್ನು ಚರ್ಚೆ ಹಾಗೂ ನಿರ್ಣಯಕ್ಕಾಗಿ ಶೈಕ್ಷಣಿಕ ಮಂಡಳಿಯ ವಿಶೇಷ ಸಭೆಯ ಮುಂದೆ ವಿಷಯ ಮಂಡಿಸಿದೆ.

**ತೀರ್ಮಾನ** : ಸಭೆಯು ಕರಡು ಪರಿನಿಯಮಕ್ಕೆ ಅನುಮೋದನೆ ನೀಡಿತು.

ಕುಲಪತಿ 1/3/X — ಕುಲಸಚಿವ

**Subject No: 2**

ವಿಷಯ : ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯಕ್ಕೆ ಯು.ಜಿ.ಸಿ. '17' ಕೋರ್ಸ್‌ಗಳಿಗೆ ಮಾನ್ಯತೆ ನೀಡಿದ್ದು, ಉಳಿದ '15' ಕೋರ್ಸ್‌ಗಳಿಗೆ ಮಾನ್ಯತೆ ನಂತರ ಪ್ರವೇಶಾತಿ ಪ್ರಕ್ರಿಯೆಗಳನ್ನು ಪ್ರಾರಂಭಿಸುವ ಬಗೆಗೆ.

* * * * *

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯಕ್ಕೆ ಯು.ಜಿ.ಸಿ., ನವದೆಹಲಿ, ಇವರಿಂದ '17' ಕಾರ್ಯಕ್ರಮಗಳನ್ನು ನಡೆಸುವಂತೆ ಮಾನ್ಯತೆಯನ್ನು ನೀಡಿದ್ದು, ವಿಶ್ವವಿದ್ಯಾನಿಲಯವು ಸದರಿ '17' ಕಾರ್ಯಕ್ರಮಗಳಿಗೆ ಈಗಾಗಲೇ ಪ್ರವೇಶಾತಿ ಪ್ರಕ್ರಿಯೆಯನ್ನು ಪ್ರಾರಂಭಿಸಿ, ಪ್ರವೇಶಾತಿಯನ್ನು ಮಾಡಿಕೊಳ್ಳಲಾಗುತ್ತಿತ್ತು. ನಂತರದಲ್ಲಿ, ಯು.ಜಿ.ಸಿ., ನವದೆಹಲಿ, ಇವರು ದಿನಾಂಕ: 01.10.2018ರಂದು F.No. 1-6/2018 (DEB-I) ರ ಸಾರ್ವಜನಿಕ ಪ್ರಕಟಣೆಯನ್ನು ಹೊರಡಿಸಿ, ಪ್ರವೇಶಾತಿ ದಿನಾಂಕವನ್ನು ದಿನಾಂಕ: 01.10.2018ರಿಂದ ದಿನಾಂಕ : 20.10.2018ರವರೆಗೆ ವಿಸ್ತರಿಸಿರುವುದು ಸರಿಯಷ್ಟೆ.

ವಿಶ್ವವಿದ್ಯಾನಿಲಯವು '32' ಕೋರ್ಸ್‌ಗಳ ಪೈಕಿ ಉಳಿದ '15' ಕೋರ್ಸ್‌ಗಳಿಗೆ ಯು.ಜಿ.ಸಿ.ಯಿಂದ ಮಾನ್ಯತೆಯನ್ನು ಪಡೆದುಕೊಳ್ಳುವ ಪ್ರಕ್ರಿಯೆಯು ನಡೆಯುತಲಿದ್ದು, ಸಧ್ಯದಲ್ಲಿಯೇ ಉಳಿದ '15' ಕಾರ್ಯಕ್ರಮಗಳಿಗೆ ಮಾನ್ಯತೆ ದೊರೆಯುವ ಸಾಧ್ಯತೆ ಇರುತ್ತದೆ.

ಆದ್ದರಿಂದ, ಉಳಿದ '15' ಕಾರ್ಯಕ್ರಮಗಳಿಗೆ ಯು.ಜಿ.ಸಿ.ಯಿಂದ ಮಾನ್ಯತೆ ದೊರೆತ ನಂತರದಲ್ಲಿ, ವಿಶ್ವವಿದ್ಯಾನಿಲಯದಲ್ಲಿ ಪ್ರವೇಶಾತಿ ಪ್ರಕ್ರಿಯೆಯನ್ನು ಪ್ರಾರಂಭಿಸುವ ಸಂಬಂಧ, ವಿಷಯವನ್ನು ಶೈಕ್ಷಣಿಕ ಮಂಡಳಿ ಸಭೆಯ ನಿರ್ಣಯಕ್ಕಾಗಿ ಮಂಡಿಸಿದೆ.

ತೀರ್ಮಾನ :

ವಿಶ್ವವಿದ್ಯಾನಿಲಯಕ್ಕೆ ಯು.ಜಿ.ಸಿ.ಯಿಂದ ಮಾನ್ಯತೆ ದೊರೆತ ನಂತರ ಬಾಕಿ ಉಳಿದ ಎಲ್ಲಾ '15' ಕೋರ್ಸ್‌ಗಳಿಗೆ ಪ್ರವೇಶ ಪ್ರಕ್ರಿಯೆ ನಡೆಸಲು ಅನುಮತಿ ನೀಡಿತು. ಮುಂದುವರೆದು, ಆಯಾ ಕೇಂದ್ರಗಳಲ್ಲೇ ಪ್ರವೇಶಾತಿ ನೀಡಿ, ಸಿದ್ಧಪಾಠಗಳನ್ನು ವಿತರಿಸಲು ಸಭೆಯು ತೀರ್ಮಾನಿಸಿತು ಹಾಗೂ ಈ ಸಂಬಂಧ ತೀರ್ಮಾನಗಳನ್ನು ತೆಗೆದುಕೊಳ್ಳಲು ಮಾನ್ಯ ಕುಲಪತಿಗಳಿಗೆ ಅಧಿಕಾರ ನೀಡಲಾಯಿತು.

ಕುಲಪತಿ 3/X

ಕುಲಸಚಿವ

**Subject No: 3**

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು ಈಗಾಗಲೇ ಯು.ಜಿ.ಸಿ.ಯಿಂದ ಮಾನ್ಯತೆ ದೊರೆತ '17' ಕಾರ್ಯಕ್ರಮಗಳಿಗೆ ಮೈಸೂರು ಕೇಂದ್ರಸ್ಥಾನವಾದ ಮುಕ್ತಗಂಗೋತ್ರಿಯಲ್ಲಿ ಹಾಗೂ ರಾಜ್ಯದ ತನ್ನ ಎಲ್ಲಾ 17' ಪ್ರಾದೇಶಿಕ ಕೇಂದ್ರಗಳಲ್ಲಿ ಈಗಾಗಲೇ ಪ್ರವೇಶಾತಿ ಪ್ರಕ್ರಿಯೆಯನ್ನು ಪ್ರಾರಂಭಿಸಿ, ವಿದ್ಯಾರ್ಥಿಗಳಿಗೆ ಪ್ರವೇಶಾತಿಯನ್ನು ಮಾಡಿಕೊಳ್ಳುತ್ತಿದೆ. ಆದರೆ, ಬಿಜಾಪುರ ಹಾಗೂ ಬೆಳಗಾಂ ಜಿಲ್ಲೆಯ ಮತ್ತು ಅವುಗಳ ಸುತ್ತ-ಮುತ್ತಲಿನ ವಿದ್ಯಾರ್ಥಿಗಳು ಪ್ರವೇಶಾತಿಗಾಗಿ ಅವರುಗಳಿಗೆ ಸಮೀಪವಿರುವ ಪ್ರಾದೇಶಿಕ ಕೇಂದ್ರಗಳಿಗೆ ತೆರಳಿ ಅಲ್ಲಿ ಪ್ರವೇಶಾತಿಯನ್ನು ಪಡೆಯಬೇಕಾಗಿರುತ್ತದೆ. ಇದು ವಿದ್ಯಾರ್ಥಿಗಳಿಗೆ ಅನಾನುಕೂಲವಾಗುತ್ತಿದ್ದು, ವಿದ್ಯಾರ್ಥಿಗಳು ಬಿಜಾಪುರ ಹಾಗೂ ಬೆಳಗಾಂ ಜಿಲ್ಲೆಗಳಲ್ಲೂ ಸಹ ಪ್ರಾದೇಶಿಕ ಕೇಂದ್ರ ಕಛೇರಿಯನ್ನು ಸ್ಥಾಪಿಸಿ, ಪ್ರವೇಶಾತಿಗೆ ಅನುವು ಮಾಡಿಕೊಡುವಂತೆ ವಿಶ್ವವಿದ್ಯಾನಿಲಯವನ್ನು ಕೋರಿರುತ್ತಾರೆ. ಈ ಮುಂಚೆ ವಿಶ್ವವಿದ್ಯಾನಿಲಯವು ಮೇಲೆ ತಿಳಿಸಿರುವ ಎರಡೂ ಜಿಲ್ಲೆಗಳಲ್ಲಿ ಪ್ರಾದೇಶಿಕ ಕೇಂದ್ರ ಕಛೇರಿಯನ್ನು ಹೊಂದಿತ್ತಾದರೂ, ಮಾನ್ಯತೆ ಇಲ್ಲದ ಕಾರಣ ಎರಡೂ ಪ್ರಾದೇಶಿಕ ಕೇಂದ್ರ ಕಛೇರಿಗಳ ಚಟುವಟಿಕೆಗಳನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿತ್ತು. ಪ್ರಸ್ತುತ, ವಿ.ವಿ.ನಿಲಯಕ್ಕೆ ಮಾನ್ಯತೆ ದೊರೆತಿರುವ ಹಿನ್ನೆಲೆಯಲ್ಲಿ, ವಿದ್ಯಾರ್ಥಿಗಳ ಪ್ರವೇಶಾತಿ ಅನುಕೂಲತೆ ದೃಷ್ಟಿಯಿಂದ ಬಿಜಾಪುರ ಹಾಗೂ ಬೆಳಗಾಂ ಜಿಲ್ಲೆಗಳಲ್ಲೂ ಸಹ ಪ್ರಾದೇಶಿಕ ಕೇಂದ್ರ ಕಛೇರಿಯನ್ನು ಆರಂಭಿಸಲು ವಿಷಯವನ್ನು ಶೈಕ್ಷಣಿಕ ಮಂಡಳಿ ಸಭೆಯ ನಿರ್ಣಯಕ್ಕಾಗಿ ಮಂಡಿಸಿದೆ.

<u>ತೀರ್ಮಾನ</u> :

ಬಿಜಾಪುರ ಹಾಗೂ ಬೆಳಗಾಂ ಜಿಲ್ಲೆಗಳಲ್ಲಿ ಪ್ರಾದೇಶಿಕ ಕೇಂದ್ರ ಕಛೇರಿಯನ್ನು ಆರಂಭಿಸಲು ಶೈಕ್ಷಣಿಕ ಮಂಡಳಿ ಸಭೆಯು ಅನುಮೋದನೆ ನೀಡಿತು.

ಅಂತಿಮವಾಗಿ, ಶೈಕ್ಷಣಿಕ ಮಂಡಳಿ ಸಭೆಗೆ ಆಗಮಿಸಿ ಮಂಡಿತ ವಿಷಯಗಳ ಬಗ್ಗೆ ಚರ್ಚಿಸಿ, ತಮ್ಮ ಅಮೂಲ್ಯ ಸಲಹೆ, ಸೂಚನೆಗಳನ್ನು ನೀಡಿ, ಸಭೆಯನ್ನು ಸುಸೂತ್ರವಾಗಿ ನಡೆಸಿಕೊಟ್ಟಿದ್ದಕ್ಕೆ ಎಲ್ಲ ಸದಸ್ಯರುಗಳಿಗೂ ಮಾನ್ಯ ಕುಲಪತಿಗಳು ಧನ್ಯವಾದಗಳನ್ನು ತಿಳಿಸುವುದರೊಂದಿಗೆ ಸಭೆಯು ಮುಕ್ತಾಯಗೊಂಡಿತು.

3/10
ಕುಲಪತಿಗಳು ಹಾಗು
ಅಧ್ಯಕ್ಷರು

3/10
ಕುಲಸಚಿವರು ಹಾಗು
ಸದಸ್ಯ ಕಾರ್ಯದರ್ಶಿಗಳು